# ಇಂಚಗೇರಿ ಸಂಪ್ರದಾಯದ ಚಿಂತನೆಗಳು ಮತ್ತು ಮೌಲ್ಯಗಳು

**ಭೀಮಶಿ ಹಡಪದ***

DOI: https://doi.org/10.5281/zenodo.21253079

**ABSTRACT**

ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದ ಇಂಚಗೇರಿ ಸಂಪ್ರದಾಯವು ಕೇವಲ ಭಕ್ತಿ, ಧ್ಯಾನ ಹಾಗೂ ಆಧ್ಯಾತ್ಮಿಕ ಬೋಧನೆಗೆ ಸೀಮಿತವಾಗದೆ, ಸಾಮಾಜಿಕ ಸುಧಾರಣೆ ಮತ್ತು ರಾಷ್ಟ್ರೀಯ ಜಾಗೃತಿಯಲ್ಲಿ ಐತಿಹಾಸಿಕ ಪಾತ್ರವನ್ನು ನಿರ್ವಹಿಸಿದೆ. ಶ್ರೀ ಮಾಧವಾನಂದ ಪ್ರಭುಗಳ ನೇತೃತ್ವದಲ್ಲಿ ಈ ಮಠವು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಜನರಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸಿತು. ಜಾತೀಯತೆ ನಿರ್ಮೂಲನೆ, ಸರ್ವಧರ್ಮ ಸಮನ್ವಯ, ಸ್ತ್ರೀ–ಪುರುಷ ಸಮಾನತೆ ಮತ್ತು ಮಹಿಳಾ ಸಬಲೀಕರಣದಂತಹ ಪ್ರಗತಿಪರ ಚಿಂತನೆಗಳ ಪ್ರಾಯೋಗಿಕ ಅನುಷ್ಠಾನವು ಈ ಪರಂಪರೆಯ ಬಹುದೊಡ್ಡ ಹೆಗ್ಗಳಿಕೆಯಾಗಿದೆ. 'ಕಾಯಕ ದಾಸೋಹ' ಸಿದ್ಧಾಂತವನ್ನು ಮೈಗೂಡಿಸಿಕೊಂಡು, ಸಾಮಾಜಿಕ ಮೌಢ್ಯಗಳನ್ನು ಪ್ರಬಲವಾಗಿ ವಿರೋಧಿಸಿ, ಅಂತರ್ಜಾತಿ ವಿವಾಹ ಹಾಗೂ ಸಾಮೂಹಿಕ ಕೃಷಿಯಂತಹ ಕ್ರಾಂತಿಕಾರಿ ಹೆಜ್ಜೆಗಳನ್ನು ಈ ಮಠ ಇಟ್ಟಿದೆ. ಮಾನವ ಧರ್ಮವನ್ನೇ ಪರಮೋಚ್ಚ ಎಂದು ಸಾರುವ ಈ ವಿಶಿಷ್ಟ ಸಂಪ್ರದಾಯವು, ಸರ್ವೋದಯದ ಮರುಸ್ಥಾಪನೆ ಮತ್ತು ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಬಗೆಯ ಸಮಗ್ರ ವಿಶ್ಲೇಷಣೆಯನ್ನು ಇಲ್ಲಿ ಮಂಡಿಸಲಾಗಿದೆ.

**KEYWORDS:** ಇಂಚಗೇರಿ ಸಂಪ್ರದಾಯ, ಸಾಮಾಜಿಕ ಸುಧಾರಣೆ, ಸ. ಸ. ಮಾಧವಾನಂದ ಪ್ರಭುಗಳು, ಲಿಂಗ ಸಮಾನತೆ, ಸರ್ವೋದಯ.

* **ಡಾ. ಭೀಮಶಿ ಹಡಪದ,** ಪ್ರಾಚಾರ್ಯರು, ಮಾ–ಭಾರತಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ರಬಕವಿ.

**ಪ್ರಸ್ತಾವನೆ:**

ಭಾರತದ ಆಧ್ಯಾತ್ಮಿಕ ಪರಂಪರೆಗೆ ಮಠಗಳ ಪಾತ್ರ ಬಹುಮುಖ್ಯವಾಗಿವೆ. ಧ್ಯಾನ, ಭಜನೆ, ಕೀರ್ತನೆಗಳ ಮೂಲಕವಾಗಿ ಆಧ್ಯಾತ್ಮಿಕ ವಿಶೇಷ ಹಿನ್ನೆಲೆಯಲ್ಲಿ ಮಠಗಳು ತಮ್ಮದೇ ಆದ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿವೆ. ಮಠಗಳು ಕೇವಲ ಆಧ್ಯಾತ್ಮಿಕ ಬೋಧನೆಯನ್ನು ಮಾಡದೆ ಅದರ ಜೊತೆಗೆ ಸಾಮಾಜಿಕ ಸುಧಾರಣೆಯತ್ತ ಗಮನ ಹರಿಸಿ ಸಾಕಷ್ಟು ಸಮಾಜಮುಖಿಯಾದ ಕಾರ್ಯಗಳನ್ನು ಮಾಡಿವೆ. ಹಲವಾರು ಪರಂಪರೆಗಳು ಕೂಡ ಹಲವಾರು ಸಾಮಾಜಿಕ ಸೇವೆಗಳನ್ನು ಮಾಡಿವೆ. ಇವುಗಳಲ್ಲಿ ಇಂಚಗೇರಿ ಸಂಪ್ರದಾಯವು ಕೂಡ ಬಹಳಷ್ಟು ಪ್ರಮುಖ ಪಾತ್ರ ವಹಿಸಿದೆ.

ಕರ್ನಾಟಕ / ಮಹಾರಾಷ್ಟ್ರ ಗಡಿಭಾಗದಲ್ಲಿ ವಿಜಯಪುರದಿಂದ 40 ಕಿ.ಮೀ ದೂರದಲ್ಲಿರುವ ಒಂದು ಸಣ್ಣ ಸುಪ್ರಸಿದ್ಧ ಗ್ರಾಮವೇ ಇಂಚಗೇರಿ. ಇಲ್ಲಿ ಸಮರ್ಥ ಸದ್ಗುರು ಪರಂಪರೆಯ ಭವ್ಯವಾದ ಮಠ ಸಂಪ್ರದಾಯವೊಂದು ಬೆಳೆದು ಬಂದಿದ್ದು ಇದನ್ನು ಎಲ್ಲೆಡೆ ಈಗ ಇಂಚಗೇರಿ ಸಂಪ್ರದಾಯ ಎಂದೇ ಕರೆಯಲಾಗುತ್ತದೆ. ವಿದ್ವಾಂಸರ ಪ್ರಕಾರ ಇದು ವಾರಕರಿ ಸಂಪ್ರದಾಯ, ನಾಥ ಸಂಪ್ರದಾಯ, ಧ್ಯಾನ ಸಂಪ್ರದಾಯದ ಒಟ್ಟು ಸಮ್ಮಿಲನವಾಗಿದೆ. ಆದ್ದರಿಂದ ಇದಕ್ಕೆ ವಿಶೇಷ ಭಕ್ತಗಣ ಇದೆ. ಈ ಸಂಪ್ರದಾಯ ಮಹಾರಾಷ್ಟ್ರದ ಕನ್ಹೇರಿಯ ಕಾಡಸಿದ್ದೇಶ್ವರ ಮಹಾರಾಜರಿಂದ ಅನುಗ್ರಹಿತವಾದ ಗುರುಲಿಂಗ ಜಂಗಮ ಮಹಾರಾಜರಿಂದ ಪ್ರಾರಂಭವಾಗುತ್ತದೆ. ಇದಕ್ಕೆ ಭಾವೂಸಾಹೇಬ ಮಹಾರಾಜರು ಮತ್ತು ಗಿರಮಲ್ಲೇಶ್ವರ ಮಹಾರಾಜರ ಕಾಲದಲ್ಲಿ ಇದಕ್ಕೊಂದು ಭದ್ರ ಬುನಾದಿ ಒದಗಿಸಿದರು. ಪ್ರೊ. ಆರ್. ಡಿ. ರಾನಡೆಯವರು ಸಂಪ್ರದಾಯದ ಅನುಯಾಯಿಗಳಾದರು. ರಾನಡೆಯವರು ಅಲಹಾಬಾದ್ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಮತ್ತು ಪ್ರೊಫೆಸರ್ ವೃತ್ತಿಯ ಜೊತೆಗೆ ಸಂಪ್ರದಾಯವನ್ನು ಬೆಳೆಸಿದರು. ಇದು ಇಂದು ದಕ್ಷಿಣ ಭಾರತದಲ್ಲಿ ಒಂದು ವಿಶಿಷ್ಟ ಸಂಪ್ರದಾಯವಾಗಿದೆ. ಇದು ಪರಮಾತ್ಮನ ಭಕ್ತಿಯ ಜೊತೆಗೆ ದೇಶಭಕ್ತಿಯ ಪಾಠವನ್ನು ಬೋಧಿಸುತ್ತದೆ. ಈ ಸಂಪ್ರದಾಯಕ್ಕೆ ಒಂದು ರಾಷ್ಟ್ರೀಯ ಮತ್ತು ಸಾಮಾಜಿಕ ಪರಿಕಲ್ಪನೆಯನ್ನು ನೀಡಿದವರೆಂದರೆ ಶ್ರೀ ಮಾಧವಾನಂದ ಮಹಾರಾಜರು. ಇವರ ಕಾಲದಲ್ಲಿ ಈ ಸಂಪ್ರದಾಯ ಭಕ್ತಿ ಪ್ರಸಾರದ ಜೊತೆಗೆ ರಾಷ್ಟ್ರೀಯ ಚಳುವಳಿಯಲ್ಲಿ ಭಾಗಿಯಾಯಿತು. ಬ್ರಿಟೀಷರ ದಬ್ಬಾಳಿಕೆಯ ವಿರುದ್ಧ ಸ್ವಾತಂತ್ರ್ಯದ ಹೋರಾಟದ ಕಿಚ್ಚನ್ನು ಈ ಭಾಗದಲ್ಲಿ ಹಬ್ಬಿಸಿದ ಕೀರ್ತಿ ಈ ಸಂಪ್ರದಾಯದ ಗುರುಗಳಿಗೆ ಮತ್ತು ಅನುಯಾಯಿಗಳಿಗೆ ಸಲ್ಲುತ್ತದೆ. ಮಹಾತ್ಮ ಗಾಂಧೀಜಿ ಮತ್ತು ನೇತಾಜಿಯವರ ಹೋರಾಟದ ಮಾದರಿಯಲ್ಲಿ ಹೋರಾಟಗಳನ್ನು ಕಟ್ಟಿ ಬೆಳೆಸಿದರು. ಹಾಗೆಯೇ ಡಾ. ಬಾಬಾಸಾಹೇಬ ಅಂಬೇಡ್ಕರರ ಸಾಮಾಜಿಕ ಸಮಾನತೆಯ ಹೋರಾಟದ ಪ್ರಭಾವ ಈ ಸಂಪ್ರದಾಯದ ಮೇಲೆ ಉಂಟಾಗಿ, ಸಾಮಾಜಿಕ ಪರಿವರ್ತನೆಗಾಗಿ ಹೋರಾಟ ಮಾಡಿದರು. ಸಮಾನತೆ, ಸ್ವಾತಂತ್ರ್ಯ, ಸಹೋದರತೆ, ಸರ್ವೋದಯ ಈ ಸಂಪ್ರದಾಯದ ಬೋಧನೆಗಳಾದವು. ಸ. ಸ. ಮಾಧವಾನಂದ ಪ್ರಭುಜೀಯವರ ಕಾಲದಲ್ಲಿ ಈ ಸಂಪ್ರದಾಯ ಭಾರತೀಯರಲ್ಲಿ ಈ ಭಾಗದಲ್ಲಿ ದೇಶಪ್ರೇಮದ ಜ್ವಾಲೆಯನ್ನು ಹೊತ್ತಿಸಿತು. ಜನರಿಗೆ ರಾಜಕೀಯ ಶಿಕ್ಷಣವನ್ನು ನೀಡಿ ರಾಷ್ಟ್ರೀಯ ಹೋರಾಟಕ್ಕೆ ಸಜ್ಜು ಮಾಡಿತು. ರಾಷ್ಟ್ರನಾಯಕರ ಆದೇಶದ ಮೇರೆಗೆ ಹಲವಾರು ಚಳುವಳಿಯಲ್ಲಿ ಭಾಗಿಯಾಗಿದ್ದರು, ಅಷ್ಟೇ ಅಲ್ಲ ಸ್ವತಃ ಮಠದ ಮಹಾರಾಜರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜನರಿಗೆ ದೈವ ಭಕ್ತಿ ಮತ್ತು ರಾಷ್ಟ್ರಭಕ್ತಿಯನ್ನು ಬೋಧಿಸಿದರು. ಮಠವನ್ನು ರಾಷ್ಟ್ರೀಯ ಹೋರಾಟಗಾರರ ಸ್ಥಳವಾಗಿ ಮಾರ್ಪಡಿಸಿದರು. ಹುಬ್ಬಳ್ಳಿ ಮತ್ತು ಇಂಚಗೇರಿಗೆ ಹಲವಾರು ರಾಷ್ಟ್ರನಾಯಕರು ಭೇಟಿ ನೀಡಿ

ಮುಕ್ತವಾಗಿ ಹೊಗಳಿದ್ದಾರೆ.

ಇಂಚಗೇರಿ ಮಠವು ಕೇವಲ ಧರ್ಮಪ್ರಚಾರ, ಸಿದ್ಧಾಂತಗಳ ಪ್ರತಿಪಾದನೆ, ಕೀರ್ತನೆ, ಭಕ್ತಿ ಪ್ರಚಾರ ಮತ್ತು ಪ್ರಸಾರಕ್ಕೆ ಸೀಮಿತವಾಗದೆ ಇಂದಿನ ಪ್ರಪಂಚದ ಮೂಲಭೂತ ಸವಾಲುಗಳನ್ನು ಎದುರಿಸಿ ಎಲ್ಲ ಸಮಸ್ಯೆಗಳ ಪರಿಹಾರಕ್ಕಾಗಿ ತಾನು ಕೇವಲ ಆಧ್ಯಾತ್ಮಿಕ ಚಿಂತನೆಗೈಯದೆ ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ಹಾಗೂ ಸಮಾನತೆ ತತ್ವಕ್ಕೆ ಅವಶ್ಯಕವಾದ ಜೀವನ ಶೈಲಿಯ ಅನುಷ್ಠಾನಕ್ಕೆ ತಾನು ಇಲ್ಲಿಯವರೆಗೆ ಮಾಡಿ ತೋರಿಸಿದ ಸಾಧನೆಗಳನ್ನು ತನ್ನ ಮೂಲದಲ್ಲಿ ಸಮ್ಮಿಲನ ಮಾಡಿಕೊಂಡು ಅದರಂತೆ ವರ್ತಮಾನದಲ್ಲಿ ಎಲ್ಲರಿಗೂ ಯೋಗ್ಯವಾಗುವ ಜೀವನ ನಡೆಸಲು ಸೂಕ್ತ ರೀತಿಯ ಸಿದ್ಧಾಂತಗಳನ್ನು ಪರಿಪಾಲಿಸುತ್ತಾ ಎಲ್ಲ ಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಸರಳವಾದ ಚಿಂತನೆಗಳ ಮೂಲಕ ಸಮಾಜ ಸುಧಾರಣೆಯನ್ನು ಬಯಸುತ್ತಿದೆ. ಅಂತಹ ಚಿಂತನೆಗಳಲ್ಲಿ ಪ್ರಮುಖವಾದವುಗಳು ಇಲ್ಲಿವೆ ಮತ್ತು ಅವುಗಳ ಸಮರ್ಥನೆಯನ್ನು ಮಠದ ಕಾರ್ಯಸಾಧನೆಯ ಮೂಲಕ ಸಮರ್ಥಿಸಲಾಗಿದೆ.

**ಜಾತ್ಯಾತೀತೆಯ ನಿಲುವು (ಧರ್ಮ ನಿರಪೇಕ್ಷತೆ):**

ಇಲ್ಲಿ ಯಾವುದೇ ಜಾತಿ, ಧರ್ಮ, ವರ್ಗ, ವರ್ಣಕ್ಕೆ ಮಹತ್ವವಿಲ್ಲ. ಕೇವಲ ಮಾನವ ಧರ್ಮಕ್ಕೆ, ಮಾನವ ಜಾತಿಗೆ ಮಾತ್ರ ಮಹತ್ವವಿದೆ. ಈ ಸಂಪ್ರದಾಯವು ಏಕಕಾಲಕ್ಕೆ ಸ್ತ್ರೀ–ಪುರುಷನನ್ನು ಸಮಾನವಾಗಿ ಕಾಣುವ ಜಗದ್ದೇಕ ಸಂಪ್ರದಾಯವಾಗಿದೆ. ಈ ತತ್ವವನ್ನು ಗರ್ಭೀಕರಿಸಿಕೊಂಡಿರುವ ಇಂಚಗೇರಿ ಮಠದ ಧರ್ಮವಾವುದು ಎಂದು ಹೇಳುವುದು ಕಷ್ಟ. ಆದರೆ ಇಷ್ಟು ಮಾತ್ರ ನಿಜ. ಅಲ್ಲಿನದು ಮಾನವ ಧರ್ಮ, ಜಾತಿ, ಮತ ಪಂಥಗಳ ಸೀಮೋಲ್ಲಂಘನೆ ಮಾಡಿದ ಪವಿತ್ರ ಧರ್ಮ ಇಂಚಗೇರಿ ಮಠದಲ್ಲಿದೆ. ಮಾನವ ಸಂಸ್ಕೃತಿಯ ಉಗಮ ಸ್ಥಾನವೇ ಇಂಚಗೇರಿ ಮಠವೆಂದು ಹೇಳಿದರೆ ಅತಿಶಯೋಕ್ತಿಯಿಲ್ಲ. ಈ ಜಾತಿಯ ಆತಂಕ ನೀಗಿಸಲು ಸ್ವತಃ ಮಾಧವಾನಂದ ಪ್ರಭುಗಳು ತಮ್ಮ ಮನೆಯಿಂದಲೇ ರಕ್ತಗತವಾಗಿ ಅನ್ಯಜಾತಿಯರೊಡನೆ ವಿವಾಹ ಬಂಧನ ಮಾಡಿ ಜಾತಿಯನ್ನು ಕಿತ್ತೊಗೆಯಲು ನಾಂದಿಹಾಡಿದರು. ಅದಕ್ಕೆ ಸಮರ್ಥನೆಯೆಂದರೆ "ಕಲ್ಲಪ್ಪ ಹೂಗಾರನ ಮಗಳನ್ನು ತಮ್ಮ ಅಣ್ಣನ ಮಗನಿಗೆ ತಂದುಕೊಂಡು, ತಮ್ಮ ತಂಗಿಯನ್ನು ಒಬ್ಬ ಮುಸಲ್ಮಾನನಿಗೆ ಕೊಟ್ಟು ಮದುವೆ ಮಾಡಿದರು." ಮಾಧವಾನಂದ ಪ್ರಭುಗಳು ತಮ್ಮೆಲ್ಲ ಹಿಂದುಳಿದವರಿಗೆ ಸಪ್ತಾಹಗಳೆಲ್ಲವನ್ನು ದೇವರೆಂದು ಹರಿಜನ ಕೇರಿಯಲ್ಲಿಯೇ ನಡೆಸುತ್ತಿದ್ದರು. ಅವರು ಸ್ವತಃ ಪೂಜಿತರಾದವರು. ಅವರನ್ನು ಎಲ್ಲರು 'ದೇವರು' ಎಂದು ಸಂಬೋಧಿಸುತ್ತಿದ್ದರು. ಹೇಗಾದರೂ ಸರಿಯೇ ಜಾತಿಯನ್ನು ಸಮಾಜದಿಂದ ದೂರ ಸರಿಸಲು ಇಂಚಗೇರಿ ಮಠದಲ್ಲಿ ಪ್ರತಿವರ್ಷ ಸರ್ವಧರ್ಮ ಸಮ್ಮೇಳನಗಳನ್ನೇರ್ಪಡಿಸುತ್ತಾ ಬಂದಿರುವರು.

**ಸಮಾನತೆ:**

ತತ್ವವನ್ನು ಮನುಷ್ಯ ಸಮಾಜದಲ್ಲಿ ನಾನಾ ಬಗೆಯ ಅಸಮಾನ, ಅಪ್ರಮಾಣ ವ್ಯತ್ಯಾಸಗಳು ಸಮಾನತೆಯ ಉಲ್ಲಂಘಿಸಿವೆ. ಬಡವ–ಶ್ರೀಮಂತ, ಮೇಲು–ಕೀಳು, ವರ್ಣಗಳಾದ ಕಪ್ಪು–ಬಿಳಿ, ಧರ್ಮದಿಂದ, ಬಹುಸಂಖ್ಯಾತ–ಅಲ್ಪಸಂಖ್ಯಾತ, ಭಾಷೆ, ವೃತ್ತಿ, ಆಚರಣೆಗೆ ಇವುಗಳಿಂದ ಮಾನವ ಸಮಾಜದಲ್ಲಿ ಅಸಮಾನತೆ ತಲೆದೋರಿದೆ. ಇದರಿಂದ ಹೊರಬರಲು ಶತಶತಮಾನಗಳು ಗತಿಸಿವೆ. ಆದರೂ ಇನ್ನೂ ಸಮಾನತೆಯ ಹುಡುಕಾಟದಲ್ಲಿದ್ದೇವೆ. ಇದರ ಪರಿಹಾರ ಸೂತ್ರ ಇಂಚಗೇರಿ ಮಠದ ಮೂಲ ಸಿದ್ಧಾಂತದಲ್ಲಿದೆ.

ಇಂಚಗೇರಿ ಮಠದಲ್ಲಿ ಗುರು-ಶಿಷ್ಯರಿಗೆ ಒಂದೇ ಗೌರವ. ಇದು ಸಮಾನತೆಯ ಮೊದಲ ಸಂಕೇತ. ಗುರುವಿನ ಪಾದಕ್ಕೆ ಶಿಷ್ಯರು ತಲೆಬಾಗಿ ನಮಸ್ಕರಿಸಿದರೆ ಗುರುಗಳು ಸಹಿತ ಶಿಷ್ಯನ ಪಾದಕ್ಕೆ ನಮಸ್ಕರಿಸುವರು. ಶ್ರೀಮಠವು ಅನೇಕ ಅಂತರ್ಜಾತಿ ವಿವಾಹ, ನೆರವೇರಿಸುತ್ತಾ ಬಂದಿದೆ. ಭಾರತ ಶಾಂತಿ ಭಾವೈಕ್ಯತಾ ಸಮ್ಮೇಳನಗಳನ್ನು ನಡೆಸುತ್ತಿದೆ. ಭಾರತ ಏಕತಾ ಪಾದಯಾತ್ರೆಗಳನ್ನು ನೆರವೇರಿಸುತ್ತಿದೆ. ಸಾವಿರಾರು ಎಕರೆ ಭೂಮಿಯಲ್ಲಿ ಸಾಮೂಹಿಕ ಬೇಸಾಯ, ಸಾಮೂಹಿಕ ಸಹಪಂಕ್ತಿ ಭೋಜನದಂತಹ ಕಾರ್ಯಕ್ರಮಗಳನ್ನು ಇಲ್ಲಿನ ಮಹಾರಾಜರು ಆಯೋಜಿಸುತ್ತಾ ಬಂದಿದ್ದಾರೆ.

**ಲಿಂಗ ಸಮಾನತೆ:**

ಮಹಿಳೆಯರನ್ನು ಬಂಧಮುಕ್ತಗೊಳಿಸಿ ಅವರಿಗೆ ಸ್ವಾತಂತ್ರ್ಯ, ಹಕ್ಕು ಸಮಾನಾವಕಾಶಗಳನ್ನು ನೀಡಿ ಪುರುಷರಂತೆ ಸಮಾಜದಲ್ಲಿ ಬದುಕಲು ಅವಕಾಶ ನೀಡಬೇಕೆಂದು ಅನೇಕಾನೇಕ ಹೋರಾಟ, ಚಳುವಳಿ, ಬೇಡಿಕೆಗಳು ಇದ್ದಾಗ್ಯೂ ಸಹಿತ ಸಂಪೂರ್ಣ ಸಮಾನತೆ ಸಾಧಿಸಲಾಗಲಿಲ್ಲ. ಅಂತಹ ಲಿಂಗ ಸಮಾನತೆಯ ಸಾಧನೆಗಾಗಿ ಮಹಿಳೆಯನ್ನು ಸಶಕ್ತೀಕರಣಗೊಳಿಸುವುದಕ್ಕಾಗಿ ಶ್ರೀಮಠವು ಮಾದರಿ ಕಾರ್ಯಗಳನ್ನು ನೆರವೇರಿಸಿದೆ ಹಾಗೂ ನೆರವೇರಿಸುತ್ತಿದೆ. ಅವುಗಳಲ್ಲಿ ಅತಿ ಮುಖ್ಯವಾಗಿ ಮಾಧವಾನಂದ ಪ್ರಭುಗಳ ಕಾಲಕ್ಕೆ ಹಾಗೂ ಇಂದು ಮಹಿಳೆಯರನ್ನು ಮಠದ ಹಾಗೂ ಸಮಾಜದ ಕಾರ್ಯಕ್ಷೇತ್ರದಲ್ಲಿ ನೋಡುವ ದೃಷ್ಟಿಕೋನವೇ ಇದಕ್ಕೆ ಪೂರಕವಾಗಿದೆ. ಲಿಂಗ ಸಮಾನತೆಗಾಗಿ ಕೈಗೊಂಡ ಕ್ರಮಗಳು: ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಹಿಳೆಯರನ್ನು ಸಂಘಟಿಸಿದ್ದು, ಮಾಧವಾನಂದ ಪ್ರಭುಗಳ ಕಾಲಕ್ಕೆ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಅನುಯಾಯಿಗಳ ಸಂಘಟನೆ ಮಾಡುವಾಗ ಮಹಿಳೆಯರಿಗೆ ಅವಕಾಶ ನೀಡಿ ಅವರಲ್ಲಿ ಅದಮ್ಯವಾದ ಹೋರಾಟದ ಛಲವನ್ನು ತೋರ್ಪಡಿಸಲು ಅವಕಾಶ ನೀಡಿದರು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳಾ ಸಂಘಟನೆ ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಚಾಲನೆ ನೀಡಿದರು. ಮಹಿಳಾ ಸಂಘಟನೆಯ ನಾಯಕತ್ವ ವಹಿಸಿದ "ಗಿರಿಜವ್ವ ಅಂಗಡಿ, ಮಾದೇವಿ ಮಸಳಿ, ವೀರಮ್ಮ ಶಿರಹಟ್ಟಿಮಠ" ಮುಂತಾದ ಅನೇಕ ಮಹಿಳೆಯರು ಸಂಘಟನೆ ಮತ್ತು ಶಕ್ತಿ ಪ್ರದರ್ಶನ ನೀಡಿದಕ್ಕೆ ನಿದರ್ಶನಗಳಿವೆ. "ನಿಂಬಾಳ ರೈಲ್ವೆ ಸ್ಟೇಷನ್ ಹಳಿಯ ಬೋಲ್ಟ್ ಕಿತ್ತು ಗೂಡ್ಸ್ ಗಾಡಿ ಕೆಡವಿದ್ದು, ಬ್ರಿಟೀಷರಿಗೆ ಈ ದೇಶದ ಮಹಿಳೆಯರು ಪುರುಷನಿಗೆ ಸಮಾನ ಎನ್ನುವ ಹೆದರಿಕೆಯನ್ನು ರವಾನಿಸಿದರು. ಇಂತಹ ಸ್ತ್ರೀ ಪುರುಷ ಸಮಾನ ಅವಕಾಶ ನೀಡಿ ಮಹಿಳೆಯನ್ನು ಸಬಲೆಯನ್ನಾಗಿಸಿ ಸಮಾನತೆ ತಂದರು.

**ಮಹಿಳಾ ಧರ್ಮಾಧಿಕಾರಿಗಳು:**

ಸ್ತ್ರೀಯರಿಗೆ ಭಾರತೀಯ ಧಾರ್ಮಿಕ ಕ್ಷೇತ್ರಗಳಲ್ಲಿ ಇನ್ನೂವರೆಗೂ ಪ್ರವೇಶ ನಿರಾಕರಿಸಿದ ಅದೆಷ್ಟೋ ಮಠ, ಮಂದಿರಗಳಿರುವಾಗ ಅವೆಲ್ಲವುಗಳನ್ನು ಮೀರಿ ಇಂಚಗೇರಿ ಮಠ ಸ್ತ್ರೀಯರಿಗೆ ಹಾಗೂ ಪುರುಷರಿಗೆ ಏಕಕಾಲಕ್ಕೆ ಸಮಾನಾವಕಾಶ ನೀಡಿ ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಎಲ್ಲ ಆಚರಣೆಗಳಲ್ಲಿ ಪ್ರವೇಶ ನೀಡಿದೆ. ಕೇವಲ ಆಚರಣೆಗಷ್ಟೇ ಅಲ್ಲದೆ ಆಡಳಿತ, ಉಸ್ತುವಾರಿ, ಮೇಲ್ವಿಚಾರಣೆ ಸಾನ್ನಿಧ್ಯವಹಿಸುವಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ಹಾಗೂ ಸಮಾನತೆಯ ಅವಕಾಶ ಕಲ್ಪಿಸಿದೆ. ಇದಕ್ಕೆ ನಿದರ್ಶನಗಳೆಂದರೆ ಭಾವೂಸಾಹೇಬ ಮಹಾರಾಜರ ಶಿಷ್ಯಳಾದ ಜತ್ತಿನ ಶಿವಲಿಂಗವ್ವ ತಾಯಿಯವರು ಮಠದ ಧರ್ಮಾಧಿಕಾರಿಯಾಗಿದ್ದು, ಸ.ಸ. ಕಲ್ಮೇಶ್ವರ ಮಹಾರಾಜರ ಶಿಷ್ಯರಾದ ಸ.ಸ. ಗೌರಮ್ಮಾಜಿಯವರು ದಾವಣಗೆರೆಯಲ್ಲಿ ಗೌರಮ್ಮಾಜಿ

ಆಶ್ರಮ ಸ್ಥಾಪಿಸಿ ಮಹಾರಾಜರಾದದ್ದು. ಮಾಧವಾನಂದ ಪ್ರಭುಗಳ ಶಿಷ್ಯರಾದ ಶ್ರೀ. ಸ.ಸ. ಕುಮುದಿನಿ ತಾಯಿಯವರು (ಕಾರಾಜನಗಿ) ರಾಯಬಾಗ ತಾಲೂಕಿನ ಪಾಲಬಾಯಿ ಮಾಧವಾನಂದ ಆಶ್ರಮದ ಧರ್ಮಾಧಿಕಾರಿಗಳಾಗಿದ್ದು ಹಾಗೂ ತಮ್ಮ 14ನೇ ವಯಸ್ಸಿಗೆ ಒಬ್ಬ ಮುಸ್ಲಿಂ ಹೆಣ್ಣು ಮಗಳು ಇಂಚಗೇರಿ ಸಂಪ್ರದಾಯಕ್ಕೆ ಶರಣಾಗಿ ಧರ್ಮಪ್ರಸಾರಕಳಾಗಿ ಇಡೀ ಭಾರತದೆಲ್ಲೆಡೆ ಸಂಚರಿಸಿ ಉತ್ತರ ಪ್ರದೇಶದ ದೇವರಿ ಬಾಬಾ ಆಶ್ರಮದಲ್ಲಿದ್ದು. ಈ ಸಂಪ್ರದಾಯದ ಹಿರಿಮೆಯನ್ನು ಜನರಿಗೆ ಮುಟ್ಟಿಸುತ್ತಿರುವ ತಾಯಿ ನೂರಜಾನ ಅಮ್ಮ. ಸ.ಸ. ಡಾ. ಎ.ಸಿ.ವಾಲಿಗುರುಗಳ ಅಂತಃಕರಣದಿಂದ ಸಾಧನೆಗೈದು ಸಿದ್ಧಿ ಸಂಪಾದಿಸುತ್ತಿರುವ ದಾವಣಗೆರೆಯ ಅನುಸೂಯಾ ತಾಯಿಯವರು, ಜತ್ತಿನಲ್ಲಿ ಪ್ರಸ್ತುತ ಇರುವ ನೀಲಮ್ಮ ತಾಯಿಯವರು. ಇಂಚಗೇರಿ ಸಂಪ್ರದಾಯದ ಧರ್ಮಪ್ರಚಾರಕರಾಗಿ ಧರ್ಮಾಧಿಕಾರಿಗಳಾಗಿ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಕುಲವನ್ನು ಮೇಲೆತ್ತಲು ಸಮಾನತೆ ಸಾಧಿಸಿದ ಲಿಂಗಭೇದ ಅಳಿಸಲು ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸತ್ಯವನ್ನು.

**ಕಾಯಕ ದಾಸೋಹ:**

‘ಕಾಯಕವೇ ಕೈಲಾಸ’ ಎಂಬ ಬಸವಣ್ಣ ಆಯ್ದಕ್ಕಿ ಮಾರಯ್ಯನವರ ತತ್ವದಲ್ಲಿ ಅಡಕವಾಗಿರುವ ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಶಿಕ್ಷಕನಾದವನು ಮಕ್ಕಳಲ್ಲಿ ಪಾಠ ಬೋಧನೆಯಲ್ಲಿ ಕೈಲಾಸ ಕಾಣಬೇಕು. ಅದು ಅವನ ಕಾಯಕ, ವೈದ್ಯ ರೋಗಿಗಳ ರೋಗ ನಿವಾರಿಸುವುದು. ಗುರು–ಉಪದೇಶಿಸುವುದು, ಸಾಹಿತಿ–ಗ್ರಂಥ ರಚಿಸುವುದು, ರಾಜಕಾರಣಿ ದೇಶವಾಳುವುದು, ವಿಜ್ಞಾನಿ ಸಂಶೋಧಿಸುವುದು, ಇವೆಲ್ಲ ಬುದ್ಧಿ ಮತ್ತು ಕೌಶಲ್ಯದರಿವಿನಿಂದ ಮಾಡುವುದಾದರೂ ಶುದ್ಧವಾದ ಶ್ರದ್ಧೆಯಿರಬೇಕು. ಮುಖ್ಯವಾಗಿ ಕೂಡಿಡುವುದು ಬಿಡಬೇಕು. ಕಾಯಕ ದಾಸೋಹದ ಪರಿಕಲ್ಪನೆಯೇ ‘ಬಾಳು ಬಾಳಗೊಡು’ ಎಂಬುದಾಗಿದೆ. ಪ್ರತಿಯೊಬ್ಬರೂ ಕಾಯಕ ಯೋಗಿಗಳಾಗಿರಬೇಕು. ಕಾಯಕದ ಮೂಲಕ ಕೈಲಾಸ ಕಾಣಬೇಕು. ಸತ್ತ ಮೇಲೆ ಸಿಗುವುದು ಕೈಲಾಸವೂ ಅಲ್ಲಾ ನರಕವೂ ಅಲ್ಲ. ಇಲ್ಲಿಯೆ ಕೈಲಾಸವಿದೆ. ಇಲ್ಲಿಯೆ ನರಕವಿದೆ. ನರಕ ಸ್ವರ್ಗಗಳ ತೀರ್ಮಾನ ಅವರವರ ಕಾಯಕವನ್ನವಲಂಬಿಸಿದೆ. ವಿನಹಃ ಹುಟ್ಟು ಸಾವನ್ನಲ್ಲ. ಮಾಧವಾನಂದ ಪ್ರಭುಗಳು ತಮ್ಮ ಹಿಂಬಾಲಕರಿಗೆ ಹೇಳುತ್ತಿದ್ದರು, ಜಗತ್ತಿನಲ್ಲಿ ಎರಡು ಜಾತಿ ಜನರಿರುವರು. ಮೊದಲನೆಯವರು ದುಡಿಯುವವರು ಅವರು ಕೈಲಾಸವಾಸಿಗಳು. ಎರಡನೆಯವರು ದುಡಿದವರದ್ದು ತಿನ್ನುವವರು ಅವರು ನರಕವಾಸಿಗಳು ಎಂದು ಅದಕ್ಕಾಗಿ ಮಹಾದೇವರು ಎಲ್ಲರೂ ಕಾಯಕ ಮಾಡಬೇಕು, ಬಂದಿದ್ದರಲ್ಲಿ ಹೆಚ್ಚಿನದನ್ನು ದಾನ ಮಾಡಬೇಕು ಎಂದು ಹೇಳುತ್ತಿದ್ದರು. “ಕೈಕೆಸರಾದರೆ ಬಾಯಿ ಮೊಸರಾದೀತು” ಕಾಯಕದಿಂದ ಬಂದಿದ್ದರಲ್ಲಿ ಸತ್ಯಶುದ್ಧತೆಯಿಂದ ಕಾಗೆಯಂತೆ ಕರೆದು ಉಣಿಸು, ಇಂದಿಗೆ ದುಡಿಯುವುದೇ ನಾಳಿಗೆ ಎಂದು ಕೂಡಿಸಬೇಡ, ಅಂಬಲಿ ಕೌದಿ ನಿನ್ನ ಆಸ್ತಿ ಮಿಕ್ಕಿದೆಲ್ಲಾ ಜಾಸ್ತಿ. ಒಕ್ಕಲುತನಕ್ಕೆ ಹೆಚ್ಚು ಒತ್ತು ಕೊಟ್ಟು, ಉಣ್ಣದಿರಲು ತಾಕೀತು ಮಾಡಿದ್ದಾರೆ.” ಇದಲ್ಲವೆ ಕಾಯಕ ಶ್ರದ್ಧೆ, ಕೈಲಾಸವಾಸಿಗಳಾಗುವ ಮಾರ್ಗ. ಹೀಗೆ ಕಾಯಕ ಪರಿಕಲ್ಪನೆ ಪ್ರತಿಪಾದಿಸಿದರು.

**ಸಾಮಾಜಿಕ ಮೌಢ್ಯಗಳ ನಿರಾಕರಣೆ:**

ಭಾರತೀಯ ಸಮಾಜದಲ್ಲಿ ಧಾರ್ಮಿಕ ತಳಹದಿಯ ಮೇಲೆ ಅನೇಕಾನೇಕ ಮೌಢ್ಯನಂಬಿಕೆಗಳನ್ನು ಆಚರಣೆ ಮಾಡುತ್ತಾ ಬಂದಿದ್ದೇವೆ. ಇದರಿಂದ ಒಂದೊಂದು ಸಮುದಾಯದ ಜನರು ತಮ್ಮ ಜೀವನವನ್ನು ಶೋಷಣೆಯಲ್ಲಿಯೇ ಕಳೆದಿದ್ದಾರೆ. ಇನ್ನೂ ಅಂತಹ ಮೌಢ್ಯಗಳೇನು ನಿಂತಿಲ್ಲವಾದರೂ ಅವುಗಳ ನಿರ್ಮೂಲನೆಗೆ ಹಲವಾರು

ಮಾರ್ಗದಲ್ಲಿ ಪ್ರಯತ್ನಿಸಲಾಗುತ್ತಿದೆ. ಸವರ್ಣೀಯರು ನಿರ್ಮಿಸಿದ ಅಸ್ಪೃಶ್ಯತೆ ಆಚರಣೆ, ಪುರುಷ ಪ್ರಧಾನ ವ್ಯವಸ್ಥೆ ಸೃಷ್ಟಿಸಿದ ಮಹಿಳಾ ಶೋಷಣೆ, ಪುರೋಹಿತಶಾಹಿಗಳು ಸೃಷ್ಟಿಸಿದ ಧಾರ್ಮಿಕ ನಂಬಿಕೆ, ವೇದಾಗಮಗಳು ನೀಡಿದ ಕಟ್ಟು ಸುಳ್ಳಿನ ಕಥೆ, ದೇವರು ಮತ್ತು ದೆವ್ವದ ಪರಿಕಲ್ಪನೆ, ಶ್ರೇಷ್ಠ ಕನಿಷ್ಠನೆಂಬ ಭಿನ್ನತೆ, ವರ್ಣ–ವರ್ಗ ವ್ಯವಸ್ಥೆಯಲ್ಲಿನ ಅಂಧಾನುಕರಣೆ ಈ ದೇಶದ ಜನರನ್ನು ಮೌಢ್ಯಗಳೊಳಕ್ಕೆ ಸಿಕ್ಕಿಸಿದ್ದು ಸುಳ್ಳಲ್ಲ. ಇಂತಹ ಎಲ್ಲ ವಿಚಾರಗಳು ವಿಚಾರಧಾರಿಗಳು ದೇವದಾಸಿ ಪದ್ಧತಿ, ಮಲ ಹೊರುವ ಪದ್ಧತಿ, ಸತಿಸಹಗಮನ ಪದ್ಧತಿ, ಬಾಲ್ಯವಿವಾಹ ಪದ್ಧತಿ, ಅಸ್ಪೃಶ್ಯತೆ ಆಚರಣೆ, ಬಲಿ ಕೊಡುವ ಪದ್ಧತಿ, ಹರಕೆ ಕೊಡುವ ಪದ್ಧತಿಗಳಿಗೆ ದಾರಿಮಾಡಿಕೊಟ್ಟವು. ಅವುಗಳಿಂದ ಸಮಾಜದಲ್ಲಿ ಮುಗ್ಧರು ತಮ್ಮ ಜೀವನ ಸರ್ವನಾಶ ಮಾಡಿಕೊಂಡರು. ಇಂತೆಲ್ಲ ಆಚರಣೆಗಳಿಂದ ಹೊರಬಂದು ಸಮಾಜವನ್ನು ಮೌಢ್ಯ ಮುಕ್ತಗೊಳಿಸಲು ಆ ಆಚರಣೆಗಳ ವಿರುದ್ಧ ಹೋರಾಡಿ ಜನರಲ್ಲಿ ಜಾಗೃತಿ ಮೂಡಿಸಲು ಮೌಢ್ಯತೆಗಳಿಂದ ಜನರನ್ನು ಹೊರತರಲು ಶ್ರೀಮಠದ ಗುರುಗಳು ಜನಮುಖಿಯಾಗಿ ಆಧ್ಯಾತ್ಮಿಕ ತಳಹದಿಯ ಮುಖಾಂತರ ನಿರಂತರ ಪ್ರಯತ್ನಿಸುತ್ತಿದ್ದಾರೆ. ಆ ಮಾರ್ಗವೆಂದರೆ,

**ಸರ್ವೋದಯದ ಮರುಸ್ಥಾಪನೆ:**

ಸರ್ವರ ಉದ್ಧಾರವೇ ಸರ್ವೋದಯ. ಸಮಾಜದ ಕಟ್ಟಕಡೆಯ ವ್ಯಕ್ತಿಯವರೆಗೂ ಗಮನಹರಿಸಿ ಉದ್ಧಾರಕ ಕ್ರಮ ಕೈಗೊಂಡು ಅವರ ಏಳಿಗೆ ಬಯಸುವುದಾಗಿದೆ. ಶ್ರೀ. ಸ.ಸ. ಮಾಧವಾನಂದ ಪ್ರಭುಗಳು ಸರ್ವೋದಯದ ಮರುಸ್ಥಾಪನೆಗಾಗಿ ಹಗಲಿರುಳು ಶ್ರಮಿಸಿದರು. ಮತ್ತೆ ಅದನ್ನು ಇಂದಿಗೂ ಶ್ರೀಮಠ ಮುಂದುವರೆಸಿಕೊಂಡು ಬರುತ್ತಿದೆ. ಮಹಾದೇವರು ಸರ್ವೋದಯ ಅನುಷ್ಠಾನಕ್ಕೆ ಪ್ರತಿಪಾದಿಸಿದ ವಿಚಾರಗಳೆಂದರೆ "ಒಕ್ಕಲುತನದ ಮಹತ್ವ, ದಾರುಬಂದಿ, ಪರಸ್ತ್ರೀ–ಪುರುಷ–ಧನವರ್ಜ, ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಪರಿಗ್ರಹ, ಸರ್ವಧರ್ಮ ಸಮನ್ವಯ, ನಮ್ರತೆ, ಅಭಯ, ಗ್ರಾಮೋದ್ಯೋಗ, ದೀನ ದಲಿತ––ಅಬಲಾ ಹರಿಜನೋದ್ಧಾರ ಇವೆನ್ನೆಲ್ಲಾ ಆಚರಿಸಿ ಇನ್ನೊಬ್ಬರಿಗೆ ಅನುಸರಿಸಲು ಪ್ರೇರೇಪಿಸಬೇಕು" ಸಹಜ ಜೀವನ, ಸಹಬಾಳ್ವೆ ನಡೆಸುವುದು. ಗ್ರಾಮಸಭೆ, ಸರ್ವಸಮ್ಮತ ನ್ಯಾಯ, ಗ್ರಾಮಕೋಶ, ಶಾಂತಿ ಸೈನಿಕರು, ಲೋಕಸೇವಕರು, ಸ್ಥಿತಪ್ರಜ್ಞರು, ತ್ಯಾಗಿಗಳು ಇಂಥವರೆಲ್ಲ ತಯಾರಾಗಬೇಕು, ತಯಾರು ಮಾಡಿ, ಮಹಾದೇವರು ಅನುಷ್ಠಾನದ ರೂಪುರೇಷೆ ತಯಾರಿಸಿ ಜನರನ್ನು ಸಂಘಟಿಸಿ 'ಸಾಮೂಹಿಕ ಬೇಸಾಯ, ಸಮ್ಮೇಳನ, ಅಂತರ್ಜಾತಿ ವಿವಾಹಗಳು, ಭೂದಾನ, ಗ್ರಾಮದಾನ, ಗೋರಕ್ಷಾ, ಸಪ್ತಾಹ, ಸತ್ಸಂಗ್, ಸಮಾವೇಶ, ಸರ್ವೋದಯಕ್ಕಾಗಿ ಪಾದಯಾತ್ರೆ ಕೈಗೊಂಡು ಸರ್ವೋದಯವನ್ನು ಮರುಸ್ಥಾಪನೆ ಮಾಡಿದರು.

**ಗೋಹತ್ಯೆ ನಿಷೇಧ:**

ಸರ್ವೋದಯ ಚಿಂತನೆಯಲ್ಲಿ ಗೋಹತ್ಯೆ ನಿಷೇಧ, ಗೋಸಂರಕ್ಷಣೆಯ ಒಂದು ಕಾರ್ಯವಾಗಿತ್ತು. ಭಾರತೀಯ ಪರಂಪರೆಯಲ್ಲಿ ಗೋಮಾತೆಯನ್ನು ಅನಾದಿ ಕಾಲದಿಂದಲೂ ಪೂಜನೀಯ ದೃಷ್ಟಿಯಲ್ಲಿ ಗೋಮಾತೆಯನ್ನು ಶತಮಾನದಲ್ಲಿ ಕಾಣುತ್ತಾ ಪೂಜೆಗೊಳಿಸುತ್ತಾ ಬಂದ ನಮ್ಮ ದೇಶ ಹನ್ನೆರಡನೆಯ ಶರಣರು ಕಂಡಂತೆ ಸಕಲ ಜೀವರಾಶಿಗಳಲ್ಲಿ ದಯೆಯಿರಬೇಕು; ಅದುವೇ ಧರ್ಮದ ಮೂಲವೆಂದು ಬಸವಣ್ಣನವರು ಬಹಳ ಮಾರ್ಮಿಕವಾಗಿ ತಮ್ಮ ವಚನದಲ್ಲಿ ತಿಳಿಸಿದ್ದಾರೆ. ಗೋಮಾತೆಯನ್ನು ತಾಯಿ ಸ್ವರೂಪದಲ್ಲಿ ಕಾಣಬೇಕು. ಅದು ನಮಗೆ ಅಮೃತಕ್ಕೆ ಸಮಾನವಾದ ಹಾಲನ್ನು ನೀಡಿ ಜೀವ ಉಳಿಸಿದೆ.

ಅದನ್ನು ಪೂಜನೀಯವಾಗಿ ಕಾಣಬೇಕು ಎಂದು ಸರ್ವೋದಯ ರೂವಾರಿಗಳಾದ ಶ್ರೀ. ಸ. ಸ. ಮಾಧವಾನಂದ ಪ್ರಭುಗಳು ಸರ್ವೋದಯ ಪಾದಯಾತ್ರೆಯುದ್ದಕ್ಕೂ ನಾಡಿನಾದ್ಯಂತ ಪ್ರಚಾರ ಮಾಡಿದರು. ಗೋರಕ್ಷಣೆಯ ಸಲುವಾಗಿ ಗೋಶಾಲೆ ನಿರ್ಮಾಣ ಮಾಡಿದರು. ಗೋಹತ್ಯಾ ನಿಷೇಧ ಕಾನೂನು ಜಾರಿಯಾಗಬೇಕೆಂದು ಮನವಿ, ಧರಣಿ, ಹೋರಾಟ ಮಾಡುತ್ತಾ ಬಂದಿರುವರು.

**ಉಪಸಂಹಾರ:**

ಇಂತಹ ಮೌಲ್ಯಯುತ ಹತ್ತಾರು ತತ್ವಜೀವನವನ್ನು ಮೂಲಚಿಂತನೆಗಳನ್ನಾಗಿ ಇಟ್ಟುಕೊಂಡು ಭಾರತೀಯ ಸಮಾಜದಲ್ಲಿ ಹೊಸ ಮನ್ವಂತರ ಬರೆದ ಸಂಪ್ರದಾಯ ಇಂಚಗೇರಿ ಸಂಪ್ರದಾಯವಾಗಿದೆ. ಭಾರತೀಯ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಆಯಾ ಕಾಲಘಟ್ಟಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ಅನೇಕಾನೇಕ ಹೊಸ ಪ್ರಯೋಗಗಳನ್ನು ಕೈಗೆತ್ತಿಕೊಂಡು ಅದರಲ್ಲಿ ಯಶಸ್ಸು ಕಾಣುತ್ತಾ ಬಂದಿರುವುದು ಹೋರಾಟಗಳ ಮೂಲಕ ತಾನು ಸಮಾಜಮುಖಿಯ ಸಂಪ್ರದಾಯವೆಂದು ಸಾಬೀತು ಪಡಿಸಿದೆ. ಇಂಚಗೇರಿ ಆಧ್ಯಾತ್ಮ ಸಂಪ್ರದಾಯ ಮತ್ತು ಗುರುಪರಂಪರೆ ಯಾವುದೇ ಗೊಡ್ಡು ಸಿದ್ಧಾಂತಗಳಿಗೆ ಅಂಟಿಕೊಳ್ಳದೆ ಈ ಅಧ್ಯಾಯದಲ್ಲಿ ವಿವರಿಸಿದಂತೆ ಸಮಾಜದ ಹಿತಚಿಂತನೆಗೆ ಪೂರಕವಾಗುವ ಎಲ್ಲರನ್ನು ಐಕ್ಯಗೊಳಿಸುವ ಒಂದೇ ಎಂಬ ಭಾವ ಬೆಸೆಯುವ ಗುಣಹೊಂದಿದೆ. ಇಲ್ಲಿ ಯಾವುದೇ ಜಾತಿ, ಧರ್ಮ, ವರ್ಣ, ವರ್ಗ ಪಂಥಗಳಿರುವುದಿಲ್ಲ. ಇದು ಸರ್ವಧರ್ಮೀಯರ ಸಂಗಮಸ್ಥಾನ ನಿಜ ಆದರೆ ಇಂದು ಜಗತ್ತು ಆಪತ್ತಿನಲ್ಲಿದೆ. ಅದನ್ನು ತಾನೇ ಸೃಷ್ಟಿಸಿಕೊಂಡಿದೆ. ಆ ಎಲ್ಲ ಬಗೆಯ ಆಪತ್ತುಗಳಿಗೆ ದಿವ್ಯ ಔಷಧಿ ಈ ಮಠದಲ್ಲಿದೆ. ಅದುವೇ 'ಆತ್ಮಜ್ಞಾನ' ಎಂಬುದು ಈ ಅಧ್ಯಯನದ ಮೂಲಕ ತಿಳಿದು ಬರುವುದು.

**ಪರಾಮರ್ಶನ ಗ್ರಂಥಗಳು:**


1. ಮಹಾಲಿಂಗ ಮಂಗಿ, (2010), ಇಂಚಗೇರಿ ಸದ್ಗುರು ಸಂಪ್ರದಾಯ ಸಮಗ್ರ ಅಧ್ಯಯನ, ಬೆಂಗಳೂರು: ಕಕ್ಕೇರಿ ಪಬ್ಲಿಕೇಷನ್ಸ್.
2. ರಂಜಾನ ದರ್ಗಾ, (2016), ಕ್ರಾಂತಿಯೋಗಿ ಮಹಾದೇವರು, ಹುಬ್ಬಳ್ಳಿ: ಸ. ಸ. ಮಾಧವಾನಂದ ಪ್ರಭುಜಿ ಜನ್ಮಶತಮಾನೋತ್ಸವ ಸಮಿತಿ.
3. ಕರ್ನಾಟಕ ರಾಜ್ಯ ಸರಕಾರ, (1999), ವಿಜಾಪುರ ಜಿಲ್ಲೆ ಗ್ಯಾಸೆಟಿಯರ್, ಬೆಂಗಳೂರು: ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
4. ಕಡಕೋಳ ಎಚ್.ಎಮ್. (ಸಂ.), (2010), ವಿಜಾಪೂರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ವಿಜಾಪೂರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
5. ವಾಲಿ ಎ. ಸಿ., (2014), ಸರ್ವೋದಯ ಪಾದಯಾತ್ರೆ, ಹುಬ್ಬಳ್ಳಿ: ಶ್ರೀ ಆಧ್ಯಾತ್ಮ ಟ್ರಸ್ಟ್ ಕಮೀಟಿ, ಭಂಡಿವಾಡ.
6. ವಾಯ್. ಕೆ. ಬಂಡ್ರೊಳ್ಳಿ, (1999), ಶೂರ ಸಂನ್ಯಾಸಿ, ಗೋಕಾಕ: ರಾಮಣ್ಣ ಅ. ಮುತ್ತಾಳ, ರಾಜಾಪೂರ.